# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ಹೇರೋಹಳ್ಳಿ ಉಪ-ವಿಭಾಗದ,
ವಾರ್ಡ್ ನಂ.40, ದೊಡ್ಡಬಿದರಕಲ್ಲು, ಕರಿಹೋಬನಹಳ್ಳಿ, ಬೆಂಗಳೂರು-5600 58.

---

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾ.ರಾ.ನಗರ ವಲಯ, ಹೇರೋಹಳ್ಳಿ ಉಪ-ವಿಭಾಗದ ವಾರ್ಡ್ ನಂ.40ರಲ್ಲಿ ದಿನಾಂಕ: 06.05.2022 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.**

1. ಶ್ರೀ. ಡಾ॥ ಮುರಳಿಧರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಜಿ.ನಾಗಭೂಷಣ್ ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
3. ಶ್ರೀಮತಿ.ಅನುಪಮ.ಡಿ, ವೈದ್ಯಾಧಿಕಾರಿ, ಸರ್ಕಾರಿ ಆಸ್ಪತ್ರೆ, ತಿಪ್ಪೇನಹಳ್ಳಿ.
4. ಶ್ರೀ.ರಮೇಶ್.ಡಿ.ಎಂ, ಹಿರಿಯ ಆರೋಗ್ಯ ಪರಿವೀಕ್ಷಕರು.
5. ಶ್ರೀ.ಮುತ್ತೇಗೌಡ.ವಿ ಕಿರಿಯ ಆರೋಗ್ಯ ಪರಿವೀಕ್ಷಕರು.
6. ಶ್ರೀ.ಮಾಲತೇಶ್.ಪಿ.ಟಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಇಲಾಖೆ.
7. ಶ್ರೀ.ಪರಮೇಶಯ್ಯ. ಕಿರಿಯ ಅಭಿಯಂತರರು, ಬೆಸ್ಕಾಂ, ದೊಡ್ಡಬಿದರಕಲ್ಲು.
8. ಶ್ರೀ.ಮೆಹಬೂಬ್.ಬಿ.ಎಸ್, ಸರ್ವೆಯರ್, ಬೆಂಗಳೂರು ಉತ್ತರ.
9. ಶ್ರೀ.ವಿವೇಕ್.ಎಂ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ (ಎಸ್.ಟಿ.ಪಿ).
10. ಶ್ರೀ.ವಿ.ಜಗದೀಶ್, ಉಪ ವಲಯ ಅರಣ್ಯಾಧಿಕಾರಿ, ಅರಣ್ಯ ಇಲಾಖೆ.
11. ಶ್ರೀ.ಆನಂದ್ ಪಾಡಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ (ಪ್ರಾಜೆಕ್ಟ್).
12. ಶ್ರೀ.ಹನುಮೇಶ್, ಮಾರ್ಷಲ್. ದೊಡ್ಡಬಿದರಕಲ್ಲು.

**ವಾರ್ಡ್ ಸಮಿತಿ ಸದಸ್ಯರುಗಳು.**

1. ಶ್ರೀ.ಕೂರ್ಲಪ್ಪ, ತಿಗಳರಪಾಳ್ಯ, ಸದಸ್ಯರು.
2. ಶ್ರೀ.ಸತೀಶ್, ಹೊಸಹಳ್ಳಿ, ಸದಸ್ಯರು
3. ಶ್ರೀ.ಮಾಲತೇಶ್.ಹೆಚ್.ಟಿ, ದೊಡ್ಡಬಿದರಕಲ್ಲು, ಸದಸ್ಯರು.
4. ಶ್ರೀ.ಮಂಜುನಾಥ್.ಎಂ, ಚನ್ನನಾಯಕನಪಾಳ್ಯ, ಸದಸ್ಯರು.
5. ಶ್ರೀ.ನಟರಾಜ್, ವಿದ್ಯಾಮಾನ್ಯನಗರ, ಸದಸ್ಯರು.

**ಈ ಕೆಳಕಂಡ ಅಧಿಕಾರಿಗಳು ಸಭೆಯಲ್ಲಿ ಗೈರು ಹಾಜರಾಗಿರುತ್ತಾರೆ.**

1. ಶ್ರೀ.ರಮೇಶ್, ಪಶು ವೈದ್ಯರು.
2. ಶ್ರೀಮತಿ.ಪೂರ್ಣಿಮಾ.ಜಿ.ಟಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ, ಕೆಂಗೇರಿ
3. ಶ್ರೀ.ಅಮರನಾಥ್.ಎಂ, ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ.
4. ಶ್ರೀ.ಪ್ರಕಾಶ್.ಕೆ.ಎನ್. ಕಿರಿಯ ಅಭಿಯಂತರರು, ಬೆಸ್ಕಾಂ, ಅಂದ್ರಹಳ್ಳಿ.
5. ಶ್ರೀ.ಗವಿಸಿದ್ದಯ್ಯ, ಸಹಾಯಕ ಅಭಿಯಂತರರು, ವಿದ್ಯುತ್ (ಬಿ.ಬಿ.ಎಂ.ಪಿ).
6. ಶ್ರೀ.ಕೆ.ಶ್ರೀನಿವಾಸಯ್ಯ, ಸಹ ಕಂದಾಯ ಅಧಿಕಾರಿ, ಕಂದಾಯ ಇಲಾಖೆ.
7. ಶ್ರೀ.ಗುರುರಾಜ್.ಎ. ಕಂದಾಯ ಪರಿವೀಕ್ಷಕಕರು, ದೊಡ್ಡಬಿದರಕಲ್ಲು.
8. ಶ್ರೀ.ಕುಮಾರ್, ಕಂದಾಯ ಪರಿವೀಕ್ಷಕಕರು, ಹೊಸಹಳ್ಳಿ.
9. ಶ್ರೀ.ಸಂತೋಷ್ ಕುಮಾರ್, ಕಂದಾಯ ವಸೂಲಿಗಾರರು, ಕರಿಹೋಬನಹಳ್ಳಿ.
10. ಶ್ರೀ.ಚಿಕ್ಕಹನುಮಯ್ಯ, ಕಂದಾಯ ಪರಿವೀಕ್ಷಕಕರು.
11. ಶ್ರೀ.ಶಿವರುದ್ರಪ್ಪ, ಪಿ.ಎಸ್.ಐ, ಪೀಣ್ಯ ಪೊಲೀಸ್ ಠಾಣೆ (ಟ್ರಾಫಿಕ್).
12. ಶ್ರೀ.ಇಬ್ರಾಹಿಂ, ಪಿ.ಎಸ್.ಐ, ಪೀಣ್ಯ ಪೊಲೀಸ್ ಠಾಣೆ.
13. ಶ್ರೀ.ರವಿಕುಮಾರ್, ಪಿ.ಐ, ಬ್ಯಾಡರಹಳ್ಳಿ ಪೊಲೀಸ್ ಠಾಣೆ.
14. ಶ್ರೀಮತಿ.ಅಮೃತಸಾಯಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆ ವಿಭಾಗ.
15. ಶ್ರೀ.ಪವನ್.ಎಂ.ಟಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
16. ಶ್ರೀ.ಷಣ್ಮುಖಪ್ಪ, ಮೇಸ್ತ್ರಿ, ತೋಟಗಾರಿಕೆ ಇಲಾಖೆ.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯಲ್ಲಿ ಎಲ್ಲಾ ಸದಸ್ಯರುಗಳು ಹಾಗೂ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯ ಉದ್ದೇಶವನ್ನು ತಿಳಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳು ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

1) **ವಾರ್ಡ್ ವ್ಯಾಪ್ತಿಯಲ್ಲಿನ ಆರೋಗ್ಯ ಇಲಾಖೆ ಬಗ್ಗೆ ಚರ್ಚಿಸಲಾದ ವಿಚಾರ.**

- ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ಶಾಲೆಗಳಲ್ಲೂ ವ್ಯಾಕ್ಸಿನೇಷನ್ ಪೂರ್ಣಗೊಂಡಿರುತ್ತದೆ ಎಂದು ಡಾ॥.ಅನುಪಮ.ಡಿ ರವರು ಸಭೆಯಲ್ಲಿ ತಿಳಿಸಿದರು.
- ಕೋವಿಡ್ ನಿಂದ ಮರಣ ಹೊಂದಿರುವ ಕುಟುಂಬದವರಿಗೆ ಬರುವ ಪರಿಹಾರ ಹಣವು ತಲುಪಿರುವುದಿಲ್ಲವೆಂದು ಕಳೆದ ಸಭೆಯಲ್ಲಿ ಶ್ರೀಮತಿ.ತಿಮ್ಮಮ್ಮ ರವರು ದೂರು ನೀಡಿದ್ದು. ಈ ಸಭೆಯಲ್ಲಿ ಹಣವನ್ನು ಶ್ರೀಮತಿ.ತಿಮ್ಮಮ್ಮ ರವರಿಗೆ ಸಂದಾಯ ಮಾಡಲಾಗಿದೆ ಎಂದು ಶ್ರೀ.ರಮೇಶ್.ಡಿ.ಎಂ, ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಖಾನೆಗಳಿಂದ ಶಬ್ದ ಮಾಲಿನ್ಯವಾಗುತ್ತಿದ್ದು, ಇದನ್ನು ನಿಯಂತ್ರಿಸಲು ಸದರಿ ಕಾರ್ಖಾನೆಗಳಿಗೆ ನೋಟೀಸ್ ನೀಡಿ ಎಚ್ಚರಿಕೆ ನೀಡಲಾಗುತ್ತಿದೆ ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿದರು.

2) **ವಾರ್ಡ್ ವ್ಯಾಪ್ತಿಯಲ್ಲಿನ ಬಿ.ಡಬ್ಲ್ಯೂ.ಎಸ್.ಎಸ್.ಬಿ ಬಗ್ಗೆ ಚರ್ಚಿಸಲಾದ ವಿಷಯಗಳು**

- ವಾರ್ಡ್ ವ್ಯಾಪ್ತಿಯಲ್ಲಿ ಮೆಘಾ ಕನ್‌ಸ್ಟ್ರಕ್ಷನ್ ವತಿಯಿಂದ ಪೈಪ್ ಲೈನ್ ಕಾಮಗಾರಿ ಕೆಲಸ ನಿಧಾನಗತಿಯಲ್ಲಿ ಸಾಗುತ್ತಿದ್ದು, ಏಪ್ರಿಲ್ ೨೦ರ ಒಳಗಾಗಿ ವಾರ್ಡ್ ವ್ಯಾಪ್ತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಲಾಗಿತ್ತು, ಆದರೆ ಭಾಗಶ: ಕಾಮಗಾರಿ ಪೂರ್ಣಗೊಂಡಿದ್ದು, ಮೇ ೨೦ ರ ಒಳಗಾಗಿ ಎಲ್ಲಾ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಸಂಬಂಧಪಟ್ಟ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.
- ಮೇ 12ರೊಳಗಾಗಿ ಗಂಗಾ ಇಂಟರ್ ನ್ಯಾಷನಲ್ ಸ್ಕೂಲ್‌ನಿಂದ ಇಂದಿರಾನಗರದವರೆಗೆ ಡಾಂಬರೀಕರಣ ಪೂರ್ಣಗೊಳಿಸ ಬೇಕೆಂದು ನೋಡಲ್ ಅಧಿಕಾರಿಗಳು ಹಾಗೂ ಸರ್ವ ಸದಸ್ಯರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಮೆಘಾ ಕನ್‌ಸ್ಟ್ರಕ್ಷನ್ ವತಿಯಿಂದ ಪೈಪ್ ಲೈನ್ ಕಾಮಗಾರಿಯನ್ನು ಸರಿಯಾಗಿ ನಿರ್ವಹಿಸದೇ ನಿಧಾನ ಗತಿಯಲ್ಲಿ ಕಾಮಗಾರಿ ನೆಡೆಯುತ್ತಿದ್ದು, ಈ ಸಂಬಂಧ ಸದರಿ ಗುತ್ತಿಗೆದಾರರ ಮೇಲೆ ಸೂಕ್ತ ಕ್ರಮಕೈಗೊಳ್ಳಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾರ್ಯಪಾಲಕ ಅಭಿಯಂತರರು ಹಾಗೂ ಅಧೀಕ್ಷಕ ಅಭಿಯಂತರರಿಗೆ ಪತ್ರ ಬರೆಯುವಂತೆ ಸರ್ವ ಸದಸ್ಯರು ಸಭೆಯಲ್ಲಿ ತಿಳಿಸಿದರು.

3) **ವಾರ್ಡ್ ವ್ಯಾಪ್ತಿಯಲ್ಲಿನ ಬಿ.ಡಬ್ಲ್ಯೂ.ಎಸ್.ಎಸ್.ಬಿ (ಎಸ್.ಟಿ.ಪಿ) ಬಗ್ಗೆ ಚರ್ಚಿಸಲಾದ ವಿಷಯಗಳು**

- ದೊಡ್ಡಬಿದರಕಲ್ಲು ಕೆರೆಗೆ ನೀರು ಹರಿಸುವ ಸಂಬಂಧ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಅಂದಾಜು ಮೊತ್ತ ಸುಮಾರು 1.70 ಕೋಟಿ ರೂಗಳು ಆಗುತ್ತದೆ ಎಂದು ಶ್ರೀ.ವಿವೇಕ್.ಎಂ, ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.

4) **ವಾರ್ಡ್ ವ್ಯಾಪ್ತಿಯಲ್ಲಿನ ಬೆಸ್ಕಾಂ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು**

- ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ವಿದ್ಯುತ್ ಕಂಬಗಳನ್ನು ಹಾಗೂ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸಿದ್ದು, ಒಂದು ವಿದ್ಯುತ್ ಕಂಬ ಹಾಗೂ ಒಂದು ಟ್ರಾನ್ಸ್‌ಫಾರ್ಮರ್ ಅನ್ನು ಸ್ಥಳಾಂತರಿಸಲು ಬಾಕಿ ಇದೆ ಎಂದು ಸದಸ್ಯರು ಸಭೆಯಲ್ಲಿ ತಿಳಿಸಿದರು.

5) **ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು**

- ವಾರ್ಡ್ ವ್ಯಾಪ್ತಿಯಲ್ಲಿನ ಬಫರ್ ಜೋನ್ ಮತ್ತು ರಾಜ ಕಾಲುವೆ ಒತ್ತುವರಿ ಮಾಡಿ ಕಟ್ಟಡ ನಿರ್ಮಿಸುತ್ತಿರುವುದಾಗಿ ಈಗಾಗಲೇ ನೋಟೀಸ್ ನೀಡುತ್ತಿರುವುದಾಗಿ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಬೋರ್‌ವೆಲ್ ಕೊರೆಸಲು ಸ್ಥಳಗಳನ್ನು ಗುರುತಿಸಿರುವ ಬಗ್ಗೆ ಯೋಜನೆ ವಿಭಾಗದ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಸದಸ್ಯರವರಿಗೆ ಸಭೆಯನ್ನು ಕರೆಯುವಂತೆ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ವಾರ್ಡ್ ಕಮಿಟಿ ಸದಸ್ಯರುಗಳಿಗೆ ಮಾಹಿತಿ ನೀಡುವಂತೆ ಸಭೆಯಲ್ಲಿ ಚರ್ಚಿಸಲಾಯಿತು.

9/6

6) ವಾರ್ಡ್ ವ್ಯಾಪ್ತಿಯಲ್ಲಿನ ಸರ್ವೆ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು

- ವಾರ್ಡ್ ವ್ಯಾಪ್ತಿಯಲ್ಲಿನ ಹೊಸಹಳ್ಳಿ ಸರ್ವೆ ನಂ.1 ಮತ್ತು 2, ಅಂದ್ರಹಳ್ಳಿ ಸರ್ವೆ ನಂ.64 ಮತ್ತು 112, ಕರಿಹೋಬನಹಳ್ಳಿ ಸರ್ವೆ ನಂ.110 ಮತ್ತು 62, ಮತ್ತು ದೊಡ್ಡಬಿದರಕಲ್ಲು ಸರ್ವೆ ನಂ.64 ಮತ್ತು 75 ಸರ್ಕಾರಿ ಜಾಗಗಳಾಗಿದ್ದು, ಇವುಗಳನ್ನು ಸರ್ವೆ ಮಾಡಿ ಹದ್ದುಬಸ್ತು ಗುರುತಿಸಿ ವರದಿ ನೀಡುವಂತೆ ನೋಡಲ್ ಅಧಿಕಾರಿಗಳು ಸರ್ವೇ ಇಲಾಖೆಯ ಭೂಮಾಪಕರಾದ ಶ್ರೀ ಮೆಹಭೂಬ್‌ರವರಿಗೆ ಸಭೆಯಲ್ಲಿ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿನ ಲಿಂಗಧೀರನಹಳ್ಳಿಯಲ್ಲಿ ಹಾದುಹೋಗುವ ರಾಜಕಾಲುವೆಯನ್ನು ಸರ್ವೆ ಮಾಡಿ ನಕ್ಷೆ ನೀಡುವಂತೆ ನೋಡಲ್ ಅಧಿಕಾರಿಗಳು ಸರ್ವೇ ಇಲಾಖೆಯ ಭೂಮಾಪಕರಾದ ಶ್ರೀ ಮೆಹಭೂಬ್‌ರವರಿಗೆ ಸೂಚಿಸಿದರು.

7) ವಾರ್ಡ್ ವ್ಯಾಪ್ತಿಯಲ್ಲಿನ ಅರಣ್ಯ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು

- ವಾರ್ಡ್ ವ್ಯಾಪ್ತಿಯಲ್ಲಿನ ಒಣ ಮರಗಳನ್ನು ತೆರವುಗೊಳಿಸುತ್ತಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಮಳೆಗೆ ಮರಗಳು ಮುರಿದು ಬಿದ್ದರೆ ತುರ್ತಾಗಿ ಕ್ರಮಕೈಗೊಳ್ಳಬೇಕೆಂದು ಸದಸ್ಯರುಗಳು ಶ್ರೀ.ವಿ.ಜಗದೀಶ್, ಉಪ ವಲಯ ಅರಣ್ಯಾಧಿಕಾರಿಯವರಿಗೆ ಸೂಚಿಸಿದರು.

**ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.**

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

9/5

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.40, ದೊಡ್ಡಬಿದರಕಲ್ಲು

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ.40, ದೊಡ್ಡಬಿದರಕಲ್ಲು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

ಅಧಿಕಾರಿಗಳ ಮಾಹಿತಿಗಾಗಿ

1. ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ. ರವರ ಆಪ್ತಶಾಖೆಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಮಂಡಿಸಿದೆ.
3. ಮುಖ್ಯ ಅಭಿಯಂತರರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಮಂಡಿಸಿದೆ.
4. ಮಾನ್ಯ ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು ರವರ ಮಾಹಿತಿಗಾಗಿ ಕಳುಹಿಸಿದೆ.
5. ಉಪ ನಿಯಂತ್ರಕರು (ಹಣಕಾಸು), ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಕೆಂ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೇ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ ರವರ ಮಾಹಿತಿಗಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರ ಮಾಹಿತಿಗಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ರವರ ಮಾಹಿತಿಗಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನೆ ರವರ ಮಾಹಿತಿಗಾಗಿ ಕಳುಹಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರ ಮಾಹಿತಿಗಾಗಿ ಕಳುಹಿಸಿದೆ.
14. ವಲಯ ಅರಣ್ಯಧಿಕಾರಿಗಳು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
15. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆಗಳು ವಿಭಾಗ ರವರ ಮಾಹಿತಿಗಾಗಿ ಕಳುಹಿಸಿದೆ.
16. ತೋಟಗಾರಿಕೆ ಅಧೀಕ್ಷಕರು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
17. ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.40, ದೊಡ್ಡಬಿದರಕಲ್ಲು ರವರ ಮಾಹಿತಿಗಾಗಿ ಕಳುಹಿಸಿದೆ.
18. ಪೋಲೀಸ್ ಇನ್‌ಸ್ಪೆಕ್ಟರ್, ಪೀಣ್ಯ/ಬ್ಯಾಡರಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
19. ಪರಿಸರ ಅಧಿಕಾರಿಗಳು ಮಾಲಿನ್ಯ ನಿಯಂತ್ರಣ ಮಂಡಳಿ ರವರ ಮಾಹಿಗಾಗಿ ಕಳುಹಿಸಿದೆ.